# ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ : ಕೇಂದ್ರ ಕಛೇರಿ: ಕಲಬುರಗಿ.

ಸಂ.ಕಕರಸಾ:ಕೇಕ:ಸಂ:ಪಾಸ್: 2698 :21-22 ದಿನಾಂಕ: 30.12.2021.

## ಸುತ್ತೋಲೆ ಸಂಖ್ಯೆ: 717 /2021

**ವಿಷಯ:** 2022 ನೇ ಸಾಲಿನ ವಿಕಲಚೇತನರ ರಿಯಾಯಿತಿ ದರದ ಬಸ್ ಪಾಸ್ ವಿತರಿಸುವ ಬಗ್ಗೆ.

**ಉಲ್ಲೇಖ:** 1. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ: 144:2017 ದಿನಾಂಕ: 02.01.2017.
2. ಸಂ:ಈಕರಸಾ:ಕೇಕ:ಸಂ:ಪಾಸ್:2335:19-20 ದಿ:14.10.2019.
3. ಸುತ್ತೋಲೆ ಸಂಖ್ಯೆ:613/2020 ದಿ:17.06.2020.
4. ಸುತ್ತೋಲೆ ಸಂಖ್ಯೆ:634/2020 ದಿ: 10.12.2020.
5. ಕರಾರಸಾ ನಿಗಮ ರವರ ಸುತ್ತೋಲೆ ಸಂಖ್ಯೆ:1660/2021 ದಿ:27.12.2021.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮವು, ಸಾಮಾಜಿಕ ಹೊಣೆಗಾರಿಕೆಯಡಿಯಲ್ಲಿ ಸರ್ಕಾರದ ನಿರ್ದೇಶನದಂತೆ ಅರ್ಜಿ ಸಲ್ಲಿಸುವ ವಿಕಲಚೇತನ ಫಲಾನುಭವಿಗಳಿಗೆ ರಿಯಾಯಿತಿ ಬಸ್ ಪಾಸಗಳನ್ನು ವಿತರಿಸುತ್ತಿದೆ.

ಪ್ರಸ್ತುತ 2022 ನೇ ಸಾಲಿಗಾಗಿ 01.01.2022 ರಿಂದ 31.12.2022 ರವರೆಗೆ ಮಾನ್ಯತೆ ಇರುವಂತೆ ವಿಕಲಚೇತನರಿಗೆ ಬಸ್ ಪಾಸ್ ವಿತರಿಸಬೇಕಿರುತ್ತದೆ. ಈ ಸಂಬಂಧ ಉಲ್ಲೇಖ-1&2 ರ ಆದೇಶಗಳಲ್ಲಿನ ನಿರ್ದೇಶನಗಳನ್ನು ಅನುಸರಿಸುವುದರ ಜೊತೆಗೆ ಪ್ರಸಕ್ತ ಸಾಲಿನಲ್ಲಿ ಈ ಕೆಳಕಂಡ ಕ್ರಮಗಳನ್ನು ಅನುಸರಿಸಿ ಬಸ್ ಪಾಸ್ ವಿತರಿಸಲು ಕ್ರಮಕ್ಕೈಗೊಳ್ಳುವುದು.

1. ವಿಕಲಚೇತನರ ರಿಯಾಯಿತಿ ಬಸ್ ಪಾಸ್‌ಗಳನ್ನು ಫಲಾನುಭವಿಗಳು ಸೇವಾಸಿಂಧು ಪೋರ್ಟಲ್ ಮುಖಾಂತರ ಅರ್ಜಿ ಸಲ್ಲಿಸಿ ನವೀಕರಿಸಿಕೊಳ್ಳಲು ಅನುಕೂಲವಾಗುವಂತೆ ಸಾಕಷ್ಟು ಕಾಲಾವಾಶ ನೀಡುವ ಉದ್ದೇಶದಿಂದ, **2021 ನೇ ಸಾಲಿನಲ್ಲಿ ವಿತರಿಸಲಾಗಿರುವ ಮತ್ತು ದಿನಾಂಕ:31.12.2021 ರವರೆಗೆ ಮಾನ್ಯತೆ ಇರುವ, ವಿಕಲಚೇತನರ ಪಾಸಗಳನ್ನು ದಿನಾಂಕ:28.2.2022 ರವರೆಗೆ ಮಾನ್ಯ ಮಾಡುವುದು.**
2. 2022 ನೇ ಸಾಲಿನ ವಿಕಲಚೇತನರ ಹೊಸ ಬಸ್ ಪಾಸ್‌ಗಳನ್ನು ದಿನಾಂಕ:17.01.2022 ರಿಂದ ವಿತರಿಸಲು ಹಾಗೂ ಹಳೆಯ ಪಾಸುಗಳನ್ನು ನವೀಕರಿಸಲು ಕ್ರಮ ವಹಿಸುವುದು.
3. 2022 ನೇ ಸಾಲಿನ ಪಾಸುಗಳ ನವೀಕರಣ ಮತ್ತು ನೂತನ ಪಾಸುಗಳಿಗೆ ರೂ.660/- ಶುಲ್ಕ ನಿಗದಿಪಡಿಸಲಾಗಿದೆ. ಇದನ್ನು ನಗದಾಗಿ ಅಥವಾ ಡಿಡಿ ರೂಪದಲ್ಲಿ ಪಾವತಿಸಿಕೊಳ್ಳುವುದು.
4. ಹಾಲಿ ಪಾಸುಗಳ ನವೀಕರಣಕ್ಕಾಗಿ ದಿನಾಂಕ:28.2.2022 ರವರೆಗೆ ಅವಕಾಶ ಕಲ್ಪಿಸಲಾಗಿದೆ.
5. ಸದರಿ ದಿನಾಂಕದ ನಂತರ ನವೀಕರಣಕ್ಕಾಗಿ ಬರುವ ಫಲಾನುಭವಿಗಳಿಗೆ ನೂತನ ಪಾಸು ವಿತರಣೆ ಮಾದರಿಯಲ್ಲಿ ಅಗತ್ಯ ದಾಖಲಾತಿಗಳನ್ನು ಪಡೆದು ಪಾಸು ವಿತರಿಸುವುದು. ನೂತನ ಪಾಸು ವಿತರಣೆಗೆ ನಿರ್ಧಿಷ್ಟ ಕಾಲಮಿತಿಯಿರುವುದಿಲ್ಲ.
6. ವಿಕಲಚೇತನರ ಬಸ್ ಪಾಸ ನವೀಕರಣ ಹಾಗೂ ನೂತನ ಬಸ್‌ಪಾಸ ವಿತರಣೆಯ ಬಗ್ಗೆ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಣೆ ಹೊರಡಿಸಿ ಅಗತ್ಯ ಪ್ರಚಾರ ನೀಡುವುದು.
7. 2022 ನೇ ಸಾಲಿನ ವಿಕಲಚೇತನರ ಬಸ್ ಪಾಸ್ ವಿತರಣೆ / ನವೀಕರಣಕ್ಕೆ ಉಲ್ಲೇಖ-3 & 4 ರ ಸುತ್ತೋಲೆ ನಿರ್ದೇಶನಗಳಂತೆ ಸೇವಾಸಿಂಧು ಪೋರ್ಟಲ್‌ನಲ್ಲಿ ದಾಖಲಿಸಲು ಕ್ರಮವಹಿಸುವುದು.
8. ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿಗಳನ್ನು ಸಲ್ಲಿಸುವ ಸಂಬಂಧ ವಿಭಾಗ ವ್ಯಾಪ್ತಿಯಲ್ಲಿ ಪತ್ರಿಕಾ ಪ್ರಕಟಣೆ ನೀಡುವುದು, ಬಸ್ ನಿಲ್ದಾಣದ ಮತ್ತು ಘಟಕದ ಅಯಕಟ್ಟಿನ ಸ್ಥಳದಲ್ಲಿ ಬ್ಯಾನರ್‌ಗಳನ್ನು ಪ್ರದರ್ಶಿಸುವ ವ್ಯವಸ್ಥೆ ಮಾಡುವುದು, ಬಸ್ ನಿಲ್ದಾಣಗಳಲ್ಲಿ (ಸಾರ್ವಜಿಕ ಉದ್ಘೋಷಣಾ ವ್ಯವಸ್ಥೆ) PAS ಮುಖಾಂತರ ಪ್ರಚಾರ ಮಾಡಲು ಕ್ರಮಕ್ಕೈಗೊಳ್ಳುವುದು.
9. 2021 ನೇ ಸಾಲಿನಲ್ಲಿ ವಿತರಿಸಲಾಗಿರುವ ವಿಕಲಚೇತನರ ಪಾಸುಗಳ ನವೀಕರಣಕ್ಕಾಗಿ ದಿನಾಂಕ:28.02.2022 ರವರೆಗೆ ಅವಕಾಶ ಕಲ್ಪಿಸಿರುವ ಬಗ್ಗೆ ಎಲ್ಲಾ ಚಾಲನಾ ಸಿಬ್ಬಂದಿಗಳಿಗೆ ಮಾಹಿತಿ ನೀಡುವುದು ಹಾಗೂ ಯಾವುದೇ ದೂರುಗಳಿಗೆ ಆಸ್ಪದ ನೀಡದಂತೆ ಕ್ರಮವಹಿಸುವುದು. ಸದರಿ ಪಾಸುಗಳನ್ನು ಅನುಮತಿಸದೇ ದೂರುಗಳಿಗೆ ಕಾರಣವಾಗುವ ಚಾಲನಾ ಸಿಬ್ಬಂದಿಗಳ ವಿರುದ್ಧ ಸೂಕ್ತ ಶಿಸ್ತು ಕ್ರಮ ಕೈಗೊಳ್ಳುವುದು.

**I.** <u>ವಿಕಲಚೇತನರ ರಿಯಾಯಿತಿ ಬಸ್ ಪಾಸ್‌ಗಾಗಿ ಅರ್ಜಿ ಸಲ್ಲಿಸುವಿಕೆ:</u>

<u>ಎ.ಆನ್‌ಲೈನ್ (ಸೇವಾಸಿಂಧು ಪೋರ್ಟಲ್ ಮುಖಾಂತರ)</u>

1. 2021 ನೇ ಸಾಲಿನಂತೆ 2022 ನೇ ಸಾಲಿನಲ್ಲಿಯೂ ಹೊಸದಾಗಿ / ನವೀಕರಣದ ವಿಕಲಚೇತನರ ರಿಯಾಯಿತಿ ಬಸ್ ಪಾಸ್‌ಗಾಗಿ ಆನ್‌ಲೈನ್‌ನಲ್ಲಿ ಸರ್ಕಾರ ನಿಗದಿಪಡಿಸಿರುವ ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.
2. ವಿಕಲಚೇತನ ಅರ್ಜಿದಾರರು ಆನ್‌ಲೈನ್‌ನಲ್ಲಿ ತಮ್ಮ ವಿವರಗಳನ್ನು ಭರ್ತಿಗೊಳಿಸಿ, ಅಗತ್ಯ ದಾಖಲೆಗಳನ್ನು JPG ಅಥವಾ PDF ನಮೂನೆಯಲ್ಲಿ ಆನ್‌ಲೈನ್‌ನಲ್ಲಿ ಅಡಕಗೊಳಿಸುವುದು.

3. ವಿಕಲಚೇತನರ ರಿಯಾಯಿತಿ ಬಸ್ ಪಾಸ್ ನವೀಕರಿಸಿಕೊಳ್ಳುವವರು ಕಕರಸಾ ನಿಗಮದ ಬಸ್ ನಿಲ್ದಾಣದ ಪಾಸ್ ಕೌಂಟರಗಳಲ್ಲಿ ಹಾಗೂ ಹೊಸದಾಗಿ ಪಾಸು ಪಡೆಯುವರು ವಿಭಾಗೀಯ ಕಛೇರಿಯಲ್ಲಿ ಹಣ ಪಾವತಿಸಲು ಅವಕಾಶವಿರುತ್ತದೆ.

## II. ಪಾಸ್ ವಿತರಣಾ ಸಿಬ್ಬಂದಿಯವರ ಕರ್ತವ್ಯಗಳು:

1. ಪಾಸು ವಿತರಣಾ ಸಿಬ್ಬಂದಿಗಳು ಘಟಕ ವ್ಯವಸ್ಥಾಪಕರ / ವಿಭಾಗೀಯ ನಿಯಂತ್ರಣಾಧಿಕಾರಿಗಳ ಪರವಾಗಿ ದಾಖಲಾತಿಗಳನ್ನು ಆನ್‌ಲೈನ್‌ನಲ್ಲಿ ಪರಿಶೀಲಿಸಿ, ಅರ್ಜಿಗಳನ್ನು ಅನುಮೋದಿಸುವುದು. ಅರ್ಜಿಗೆ ಸಂಬಂಧಿಸಿದ ಮಾಹಿತಿಯೂ ಎಸ್.ಎಂ.ಎಸ್ ಮೂಲಕ ಅರ್ಜಿದಾರರಿಗೆ ರವಾನೆಗೊಳ್ಳುವ ವ್ಯವಸ್ಥೆ ಇರುತ್ತದೆ.
2. ಅರ್ಜಿ ಸಂಖ್ಯೆ ಆಯ್ಕೆ ಮಾಡಿ view processing history ಮೇಲೆ ಕ್ಲಿಕ್ ಮಾಡಿದಾಗ, ಸಂಪೂರ್ಣ ಅರ್ಜಿಯ ವಿವರ ಮತ್ತು ಅಡಕಗಳನ್ನು ಪರಿಶೀಲಿಸಬಹುದು.
3. ಪಾಸು ವಿತರಣೆಗೆ ಸಂಬಂಧಿಸಿದ ಭೌತಿಕ ದಾಖಲಾತಿಗಳನ್ನು ಕಡ್ಡಾಯವಾಗಿ ಪಡೆಯುವುದು.
4. ವಿತರಣಾ ಸಿಬ್ಬಂದಿಗಳು Divisional Controller ಗೆ ಲಾಗಿನ ಮಾಡಿ, Message Box ಗೆ ಹೋಗಿ Inbox ನ್ನು ಆಯ್ಕೆ ಮಾಡುವುದು.
5. ಆನ್‌ಲೈನ್ ಅರ್ಜಿಗಳು ಎಲ್ಲಾ ರೀತಿಯಿಂದ ಸಮರ್ಪಕವಾಗಿದ್ದಲ್ಲಿ, Deliver option ದಾಖಲಿಸುವುದು ಮತ್ತು ಹಿಂದಿನಂತೆ ಪಾಸು ವಿತರಿಸಲು ಈ ಹಿಂದೆ ಅನುಸರಿಸುತ್ತಿದ್ದ ಕ್ರಮಗಳನ್ನೇ ಅನುಸರಿಸುವುದು.
6. ಪ್ರತಿ ವಿಭಾಗದ ಪಾಸು ಶಾಖೆಯವರು ಪಾಸು ವಿತರಣೆಯ ಎಂ.ಐ.ಎಸ್. ವರದಿಗಳನ್ನು ಸಕಾಲದಲ್ಲಿ ಪಡೆದುಕೊಂಡು ದೃಢೀಕರಿಸಿ ದಾಖಲೆಗಳನ್ನು ನಿರ್ವಹಿಸುವುದು.

## III. ಗಣಕ ಇಲಾಖೆಯಿಂದ ಕರ್ತವ್ಯಗಳು:

1. ಸೇವಾಸಿಂಧು ಯೋಜನೆಯಡಿ ವಿತರಿಸುವ ವಿಕಲಚೇತನರ ರಿಯಾಯಿತಿ ಪಾಸುಗಳ ವರದಿಗಳನ್ನು ಅಭಿವೃದ್ಧಿಪಡಿಸುವ ಸಂಬಂಧ ಸಂಬಂಧಿಸಿದ ಇಲಾಖೆಯೊಂದಿಗೆ ಸಮನ್ವಯಿಸುವುದು.
2. 2021 ನೇ ಸಾಲಿನಂತೆ ಯಾವುದೇ ತೊಡಕುಗಳಿಲ್ಲದೇ ಸೇವಾಸಿಂಧು ಪೋರ್ಟಲ್‌ನಲ್ಲಿ ಅನುಷ್ಠಾನಗೊಳಿಸುವ ಸಂಬಂಧ ಹಾಗೂ ಎಂ.ಐ.ಎಸ್ ವರದಿಗಳು ಲಭ್ಯವಾಗುವಂತೆ ಅಗತ್ಯ ಕ್ರಮ ಕೈಗೊಳ್ಳುವುದು.
3. ವಿಭಾಗಗಳ ಸೇವಾಸಿಂಧು ನೋಡೆಲ್ ಅಧಿಕಾರಿಗಳಿಗೆ ಸೇವಾಸಿಂಧು ಪೋರ್ಟಲ್ ಬಳಕೆ ಸಂಬಂಧ ಅಗತ್ಯ ಮಾಹಿತಿ / ತರಬೇತಿ/ ನಿರ್ದೇಶನ ನೀಡುವುದು.

ಇನ್ನುಳಿದಂತೆ ಉಲ್ಲೇಖಿತ ಸಾಮಾನ್ಯ ಸ್ಥಾಯಿ ಆದೇಶದಲ್ಲಿನ ಅಂಶಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಸುತ್ತೋಲೆ ಸ್ವೀಕರಿಸಿ ಜಾರಿಗೊಳಿಸಿರುವ ಬಗ್ಗೆ ಈ ಕಛೇರಿಗೆ ಅನುಸರಣಾ ವರದಿ ಸಲ್ಲಿಸಲು ತಿಳಿಸಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು

ಪ್ರತಿಯನ್ನು ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು, ಕ.ಕ.ರ.ಸಾ ನಿಗಮ, ಕೇಂದ್ರ ಕಛೇರಿ, ಕಲಬುರಗಿ ರವರ ಮಾಹಿತಿಗಾಗಿ.

ಪ್ರತಿಯನ್ನುಎಲ್ಲಾ ಇಲಾಖಾ ಮುಖ್ಯಸ್ಥರು ಕಕರಸಾ ನಿಗಮ ಕೇಕ, ಕಲಬುರಗಿ ರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.

ಪ್ರತಿಯನ್ನು: ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕ.ಕ.ರ.ಸಾ.ನಿಗಮ, ಕಲಬುರಗಿ ವಿಭಾಗ-1/ವಿಭಾಗ-2/ಬೀದರ/ ಯಾದಗೀರ/ರಾಯಚೂರು/ಬಳ್ಳಾರಿ/ಹೊಸಪೇಟೆ/ಕೊಪ್ಪಳ/ವಿಜಯಪುರ ರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.

ಪ್ರತಿಯನ್ನು ಉ.ಮು.ಸಂ.ವ್ಯ (ಕೇತದ), ಕಕರಸಾ ನಿಗಮ ಕೇಕ, ಕಲಬುರಗಿ ರವರ ಮಾಹಿತಿಗಾಗಿ & ಸೂಕ್ತ ಕ್ರಮಕ್ಕಾಗಿ.

ಪ್ರತಿಯನ್ನು ಪ್ರಾಂಶುಪಾಲರು, ಪ್ರಾ.ತ.ಕೇಂ. ಕಕರಸಾ ನಿಗಮ :ಹುಮನಾಬಾದ/ಎಚ್.ಬಿ.ಹಳ್ಳಿ ರವರ ಮಾಹಿತಿಗಾಗಿ.